ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್ **1515 /2023**

| | | |
|---|---|---|
| ಸಾಕ್ಷಿಯ ಹೆಸರು | : ಸತ್ಯಮಂಜು | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಮರಿಯಣ್ಣ | ಪಿ.ಡಬ್ಲ್ಯು 1 |
| ವಯಸ್ಸು | : 36 ವರ್ಷ | |
| ಉದ್ಯೋಗ | : ಕೂಲಿ | |
| ವಾಸ ಸ್ಥಳ | : ಬೀರೂರು | |

ದಿನಾಂಕ:**06-01-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ಆರೋಪಿ ನಮ್ಮದೇ ಊರಿನವರು ಇರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ, ಈಗ ಕೆಲವು ದಿನಗಳ ಹಿಂದೆ ಪೊಲೀಸರು ಊರಿಗೆ ಬಂದಾಗ ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು, ಅದರಲ್ಲಿ ಏನು ಬರೆದಿದ್ದಾರೆ ಮತ್ತು ಯಾವ ಕಾರಣಕ್ಕೆ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ತಿಳಿಸಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯ ಸಹಿ ಇರುವ ದಾಖಲೆ ಜಪ್ತಿ ಪಂಚನಾಮೆ ಆಗಿದ್ದು ಅದನ್ನು ನಿ.ಪಿ-1 ಎಂದು , ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲು: ಸ.ಸ.ಅ ರರಿಂದ:

ದಿ: 15-08-2023 ರಂದು ಚಾಸಾ-4 ರವರು ತಮ್ಮ ಸಿಬ್ಬಂಧಿಗಳೊಂದಿಗೆ ಅಜ್ಜಂಪುರ ಟೌನ್ ನಲ್ಲಿ ಗಸ್ತಿನಲ್ಲಿ ಇರುವಾಗ ಬೀರೂರು ರಸ್ತೆಯ ಕಡೆಗೆ ಹೋಗುವ ಚನ್ನಾಪುರದ ಗ್ರಾಮದ ಹತ್ತಿರ ಇರುವ ಖುಷಿ ಫ್ಯಾಮಿಲಿ ರೆಸ್ಟೋರೆಂಟ್ ನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ತಮಗೆ ಮಾಹಿತಿ ಬಂದಿದೆ ಎಂದು ತಿಳಿಸಿ ನನ್ನನ್ನು ದಾಳಿಗೆ ಪಂಚರಾಗಿ ಸಹಕರಿಸುವಂತೆ ಕೇಳಿದರು, ನಾನು ಆ ಸಮಯಕ್ಕೆ ಬಗ್ಗವಳ್ಳಿ ಗೇಟ್ ಬಳಿ ನಿಂತಿದ್ದೆ ಮತ್ತು ಪಂಚರಾಗಲು ಒಪ್ಪಿಕೊಂಡೆ ಎಂದರೆ ಸರಿಯಲ್ಲ. ಎಲ್ಲರೂ ಸೇರಿ ಮಾಹಿತಿ ಬಂದ ಸ್ಥಳಕ್ಕೆ 4-30 ಗಂಟೆ ಸಮಯಕ್ಕೆ ಹೋದೆವು ಎಂದರೆ ಸರಿಯಲ್ಲ. ಆರೋಪಿಯ ಮೇಲೆ ದಾಳಿ ಮಾಡಿ ಪೊಲಿಸೀರು ಹಿಡಿದುಕೊಂಡರು ಎಂದರೆ ಸರಿಯಲ್ಲ. ಡಾಬಾದ ಅಡಿಗೆ ಕೋಣೆಯಲ್ಲಿ ನೋಡಲಾಗಿ ಒಂದು ರಟ್ಟಿನ ಡಬ್ಬಿಯಲ್ಲಿ 650 ಎಂ.ಎಲ್ ನ 12 ಬಿಯರ್ ಬಾಟಲಿಗಳು, 180 ಎಂ.ಎಲ್ ನ 12 ಒಸಿ ವಿಸ್ಕಿಯ ಟೆಟ್ರಾಪ್ಯಾಕೇಟುಗಳು, 8 ಓಲ್ಡ್ ಮಂಕ್ ಟೆಟ್ರಾ ಪ್ಯಾಕೇಟುಗಳು, 5

ಓಲ್ಡ್ ಅಡ್ಮಿರಲ್ ಬ್ರಾಂಡಿ ಪ್ಯಾಕೇಟುಗಳು, 180 ಎಂ.ಎಲ್ ನ 3 ಎಂ.ಸಿ ವಿಸ್ಕಿಯ ಪೌಚುಗಳು ಇದ್ದವು ಎಂದರೆ ಸರಿಯಲ್ಲ. ಕಾರಣ ಚಾಸಾ-4 ರವರು ನನ್ನ ಸಮಕ್ಷಮ ನಿ.ಪಿ-1 ರಂತೆ ಪಂಚನಾಮೆಯನ್ನು ಜರುಗಿಸಿ ಅಕ್ರಮ ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಪಂಚನಾಮೆ ಬರೆದು ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಇದೇ ರೀತಿ ನಾನು ದಿಃ 04-04-2023 ರಂದು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಮದ್ಯದ ಪೌಚುಗಳನ್ನೇ ಪೊಲೀಸರು ಅಮಾನತ್ತುಪಡಿಸಿಕೊಡಿಂದ್ದಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಊರಿನ ವ್ಯಕ್ತಿ ಇರುವ ಕಾರಣ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರವರಿಂದಃ</u>

ವಕೀಲರು ಪಾಟೀಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

<u>ಮರುವಿಚಾರಣೆಃ ಇರುವುದಿಲ್ಲ .</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.